**ದಿನಾಂಕಃ  21-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ  ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

8. ಎಂ.ಓ. 3ರ ಮೇಲೆ ಇರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ.  ನಿಪಿ3,4,5,7,8,9,10,11 ಪೋಟೋಗಳಲ್ಲಿ ನಾನು ಇದ್ದೇನೆ. ಸದರಿ ಪೋಟೋಗಳನ್ನು ಎಸಿಬಿ ಠಾಣೆಯಲ್ಲಿ ತೆಗೆದಿರುತ್ತಾರೆ. ಎಸಿಬಿ ಠಾಣೆಯಲ್ಲಿ ಶೌಚಾಲಯ ಎಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ಏಕೆಂದರೆ ನಾನು ಅಲ್ಲಿ ಆ ಶೌಚಾಲಯಕ್ಕೆ ಹೋಗಲಿಲ್ಲ.

9. ಈಗ ತೋರಿಸುತ್ತಿರುವ ಆರ್ಟಿಕಲ್ 4 ಮತ್ತು 4(ಎ) ಎಂದಿರುವ  ವಸ್ತುಗಳ  ಮೇಲಿರುವ ಚೀಟಿಗಳಲ್ಲಿ ನನ್ನ ಸಹಿ ಇರುತ್ತವೆ.  ನಿಮ್ಮ ಸಹಿಗಳನ್ನು ಪಡೆದ ನಂತರ ಅವುಗಳನ್ನು  ಪ್ಯಾಕ್ ಮಾಡಿರುತ್ತಾರೆ ಅಲ್ಲವೇ ಎಂದು ಕೇಳಿದ  ಪ್ರಶ್ನೆಗೆ,  ಸಾಕ್ಷಿ,  6 ವರ್ಷಗಳಾಗಿರುವುದಿರಿಂದ ಸರಿಯಾಗಿ ನೆನಪಿಲ್ಲ ಎನ್ನುತ್ತಾರೆ.

10. ಈಗ ತೋರಿಸುತ್ತಿರುವ ಆರ್ಟಿಕಲ್ 6 ಮತ್ತು 6(ಎ) ಎಂದಿರುವ  ವಸ್ತುಗಳ ಮೇಲಿರುವ ಚೀಟಿಗಳಲ್ಲಿ ನನ್ನ ಸಹಿ ಇರುತ್ತವೆ.  ಫಿರ್ಯಾದುದಾರ ಮತ್ತು ಆರೋಪಿಯ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿ, ನಂತರ ನಿಮ್ಮ ಸಹಿಗಳನ್ನು ಪಡೆದು ಅವುಗಳನ್ನು  ಪ್ಯಾಕ್ ಮಾಡಿರುತ್ತಾರೆ ಅಲ್ಲವೇ ಎಂದು ಕೇಳಿದ  ಪ್ರಶ್ನೆಗೆ,  ಸಾಕ್ಷಿ,  6 ವರ್ಷಗಳಾಗಿರುವುದಿರಿಂದ ಸರಿಯಾಗಿ ನೆನಪಿಲ್ಲ ಎನ್ನುತ್ತಾರೆ.

11. ದೂರುದಾರರು ಮನೆಗೆ ಹೋಗುವಾಗ ತನಿಖಾಧಿಕಾರಿಯವರು ಆಕೆಗೆ ಒಂದು ಡಿಜಿಟಲ್ ಕ್ಯಾಮರಾವನ್ನು ನೀಡಿ, ನಿಮ್ಮ ಹಾಗೂ ಆರೋಪಿಯ ನಡುವೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ

ಮಾಡಿಕೊಳ್ಳಿ ಎಂದು ಹೇಳಿ ನೀಡಿದರು ಅಲ್ಲವೇ ? ಎಂದು ಕೇಳಿದ ಪ್ರಶ್ನೆಗೆ, ಸಾಕ್ಷಿ , ನನಗೀಗ ಸರಿಯಾಗಿ ನೆನಪಿಲ್ಲ ಎನ್ನುತ್ತಾರೆ.

12. ನಂತರ ಎಲ್ಲರೂ ದೂರುದಾರರಾದ ಅಂಬಿಕಾ ರವರ ಮನೆಗೆ ಹೋದೆವು ಎನ್ನುವುದು ಸರಿ . ಅಲ್ಲಿಗೆ ಹೋಗುವ ಮೊದಲು ಎಸಿಬಿ ಕಛೇರಿಯಲ್ಲಿ ಮಾಡಿದ ಪ್ರಾಯೋಗಿಕ ಪಂಚನಾಮೆಗೆ ಸಹಿ ಹಾಕಿರುತ್ತೀರಿ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ , ಸಾಕ್ಷಿ , ಪ್ರಾಯೋಗಿಕ ಪಂಚನಾಮೆ ನಿಪಿ 12 ನ್ನು ಪರಿಶೀಲಿಸಿ ಅದರ ಮೇಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 12(ಸಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

13. ನಂತರ ನಾನು , ಪಂಚಸಾಕ್ಷಿ 1 , ದೂರುದಾರರು , ಎಸಿಬಿ ಸಿಬ್ಬಂದಿ , ತನಿಖಾಧಿಕಾರಿ ಎಲ್ಲರೂ ಎರಡು ವಾಹನಗಳಲ್ಲಿ ಮಧ್ಯಾಹ್ನ 02.30 ಕ್ಕೆ ಎಸಿಬಿ ಕಛೇರಿ , ಮೈಸೂರು ನ್ನು ಬಿಟ್ಟು ಮಧ್ಯಾಹ್ನ 03.20 ರ ಸಮಯಕ್ಕೆ ನಂಜನಗೂಡಿನ ಪ್ರಗತಿ ನಗರದಲ್ಲಿರುವ ದೂರುದಾರರ ಮನೆಯನ್ನು ತಲುಪಿದೆವು ಎನ್ನುವುದು ಸರಿ . ಅವರ ಮನೆಯಿಂದ ಸ್ವಲ್ಪ ದೂರದಲ್ಲಿ ಎರಡು ವಾಹನಗಳನ್ನು ನಿಲ್ಲಿಸಿ , ನಾನು ಮತ್ತು ದೂರುದಾರರು ಆಕೆಯ ಮನೆಯ ಒಳಕ್ಕೆ ಹೋದೆವು ಎನ್ನುವುದು ಸರಿ . ಅಲ್ಲಿ ದೂರುದಾರರು 1 ನೇ ಆರೋಪಿ ಮಣಿಕಂಠ ರವರಿಗೆ ಫೋನ್ ಮಾಡಿದರು, 1 ನೇ ಆರೋಪಿ ಫೋನ್ ರಿಸೀವ್ ಮಾಡಿರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ , ನನಗೆ ನೆನಪಿಲ್ಲ ಎನ್ನುತ್ತಾರೆ. ನಂತರ ದೂರುದಾರರು 1 ನೇ ಆರೋಪಿಯ ಮಗನಿಗೆ ಫೋನ್ ಮಾಡಿ, 1 ನೇ ಆರೋಪಿಯನ್ನು ಕರೆದುಕೊಂಡು ಬರಬೇಕು ಎಂದು ಹೇಳಿದರು ಎನ್ನುವುದು ಸರಿ . ಸ್ವಲ್ಪ ಹೊತ್ತಿಗೆ 1 ನೇ ಆರೋಪಿ ಫಿರ್ಯಾದುದರರ ಮನೆಗೆ ಬಂದರು ಎನ್ನುವುದು ಸರಿ . ಆಗ 1 ನೇ ಆರೋಪಿ "ಎಷ್ಟೋ ಕೊಡಿ " ಎಂದು ಕೇಳಿದಾಗ ದೂರುದಾರರು ತಮ್ಮ ಪರ್ಸ ನಿಂದ ರೂ. 8,000/- ನಗದು ಹಣವನ್ನು ತೆಗೆದು 1 ನೇ ಆರೋಪಿಗೆ

ನೀಡಿದಾಗ , ಆತ ಆ ಹಣವನ್ನು ಪಡೆದುಕೊಂಡರು , ಎಂದು ಮಾಡಿದ ಸಲಹೆಗೆ ಸಾಕ್ಷಿ , ನನಗೀಗ ನೆನಪಿಲ್ಲ ಎನ್ನುತ್ತಾರೆ. 1 ನೇ ಆರೋಪಿ ಆ ಹಣವನ್ನು ತನ್ನ ಬಲಗೈನಿಂದ ಪಡೆದು, ಅದನ್ನು ಎಣಿಸಿಕೊಂಡು , ತನ್ನ ಪ್ಯಾಂಟ್ ನ ಬಲ ಭಾಗದ ಜೇಬಿಗೆ ಹಾಕಿಕೊಂಡರು, ಎಂದು ಮಾಡಿದ ಸಲಹೆಗೆ ಸಾಕ್ಷಿ , “ನೆನಪಿಲ್ಲ " ಎನ್ನುತ್ತಾರೆ. ನಂತರ 1 ನೇ ಆರೋಪಿ "ನಾಳೆ ಅಥವಾ ನಾಳಿದ್ದು ಆಗುತ್ತೆ " ಎಂದರು ಎಂದು ಮಾಡಿದ ಸಲಹೆಗೆ ಸಾಕ್ಷಿ , “ಗೊತ್ತಿಲ್ಲ " ಎನ್ನುತ್ತಾರೆ. ನಂತರ ನಾನೂ ಮತ್ತು ದೂರುದಾರಳು ಮನೆಯಿಂದ ಹೊರ ಬಂದೆವು ಎನ್ನುವುದು ಸರಿ . ದೂರುದಾರರು ತನ್ನ ಸೀರೆಯ ಸೆರಗಿನಿಂದ ಮುಖವನ್ನು ಒರೆಸಿಕೊಂಡು ತನಿಖಾಧಿಕಾರಿಗೆ ಸೂಚನೆ ನೀಡಿದರು ಎನ್ನುವುದು ಸರಿ. ನಂತರ ತನಿಖಾಧಿಕಾರಿ , ಎಸಿಬಿ ಸಿಬ್ಬಂದಿ , ಎಲ್ಲರೂ ಆ ಮನೆಯ ಒಳಗೆ ಬಂದರು ಎನ್ನುವುದು ಸರಿ . ಆಗ ದೂರುದಾರರು 1 ನೇ ಆರೋಪಿಯನ್ನು ತೋರಿಸಿ , ಇವರರೇ ನನ್ನಿಂದ ರೂ.8000/- ಲಂಚದ ಹಣವನ್ನು ಪಡೆದಿರುವವರು ಎಂದು ಹೇಳಿ ತೋರಿಸಿದರು ಎನ್ನುವುದು ಸರಿ . ಆಗ ಎಸಿಬಿ ಸಿಬ್ಬಂದಿ 1 ನೇಆರೋಪಿಯನ್ನು ಹಿಡಿದಕೊಂಡು ತಮ್ಮ ವಶಕ್ಕೆ ಪಡೆದರು ಎನ್ನುವುದು ಸರಿ. ತನಿಖಾಧಿಕಾರಿಯವರು 1 ನೇ ಆರೋಪಿಯನ್ನು ವಿಚಾರಿಸಿದರು ಎನ್ನುವುದು ಸರಿ . ಆಗ ತನಿಖಾಧಿಕಾರಿ ನನ್ನನ್ನು ವಿಚಾರಿಸಿದರು ಎನ್ನುವುದು ಸರಿ. ಆಗ ನಾನು ತನಿಖಾಧಿಕಾರಿಯವರ ಮುಂದೆ, ದೂರುದಾರರು ಕೊಟ್ಟ ಲಂಚದ ಹಣವನ್ನು 1 ನೇ ಆರೋಪಿ ಮಣಿಕಂಠ ಪಡೆದಿರುತ್ತಾರೆ ಎಂದು ಹೇಳಿರುತ್ತೇನೆ ಎನ್ನುವುದು ಸರಿಯಲ್ಲ. ನಾನು ತನಿಖಾಧಿಕಾರಿಯವರ ಮುಂದೆ , ದೂರುದಾರರು "8 ಇದೆ" ಎಂದು ಹೇಳಿ 1 ನೇ ಆರೋಪಿಗೆ ಹಣ ನೀಡಿದಾಗ ಅವರು ಅದನ್ನು ಎಣಿಸಿಕೊಂಡು ಪ್ಯಾಂಟ್ ನ ಬಲ ಭಾಗದ ಜೇಬಿಗೆ ಹಾಕಿಕೊಂಡರು ಎಂದು ಹೇಳಿರುತ್ತೇನೆ ಎನ್ನುವುದು ಸರಿಯಲ್ಲ.

14. ಅಲ್ಲಿ ಸೋಡಿಯಂ ದ್ರಾವಣವನ್ನು ತಯಾರಿಸಿಕೊಂಡು 1 ನೇ ಆರೋಪಿಯ ಎರಡೂ ಕೈಗಳನ್ನು ಪ್ರತ್ಯೇಕವಾಗಿ ಆ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ , ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು ಎನ್ನುವುದು ಸರಿ . ಈಗ ನೋಡುತ್ತಿರುವ ಎಂ ಒ 4 ಮತ್ತು 5 ಗುಲಾಬಿ ಬಣ್ಣದ ದ್ರಾವಣವಿರುವ ಬಾಟಲುಗಳ ಮೇಲೆ ಇರುವ ಚೀಟಿಗಳಲ್ಲಿ ನನ್ನ ಸಹಿ ಇರುತ್ತವೆ.

15. ತನಿಖಾಧಿಕಾರಿಯವರು ಹಣ ಎಲ್ಲಿ ಎಂದು 1 ನೇ ಆರೋಪಿಯನ್ನು ಕೇಳಿದಾಗ , ಆತ ತನ್ನ ಪ್ಯಾಂಟ್ ನ ಬಲ ಭಾಗದ ಜೇಬಿನಿಂದ ಹಣವನ್ನು ತೆಗೆದುಕೊಟ್ಟರು , ಎಂದು ಮಾಡಿದ ಸಲಹೆಗೆ ಸಾಕ್ಷಿ, “ನನಗೆ ನೆನಪಿಲ್ಲ " ಎನ್ನುತ್ತಾರೆ. ನಾನು ಮತ್ತು ಪಂಚ ಸಾಕ್ಷಿ 1 ರವರು ಆ ನೋಟುಗಳ ಮೇಲೆ ಇದ್ದಂತಹ ನಂಬರ್ ಗಳನ್ನು ಮತ್ತು ಮುಖ ಬೆಲೆಯನ್ನು ಈಗಾಗಲೇ ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡಿದ್ದ ನಂಬರ್ ಮತ್ತು ಮುಖ ಬೆಲೆಯನ್ನು ತಾಳೆ ಮಾಡಿ ನೋಡಿದಾಗ, ಅವು ತಾಳೆಯಾಗಿದ್ದವು ಎನ್ನುವುದು ಸರಿ . ನಂತರ ತನಿಖಾಧಿಕಾರಿಯವರು ಆ ಹಣವನ್ನು ಪಡೆದು ಪ್ಯಾಕ್ ಮಾಡಿ ಸೀಲು ಮಾಡಿ , ನನ್ನ ಸಹಿಯನ್ನು ಪಡೆದುಕೂಂಡರು ಎನ್ನುವುದು ಸರಿ . ನಂತರ 1 ನೇ ಆರೋಪಿಗೆ ಬದಲಿ ಪ್ಯಾಂಟ್ ವ್ಯವಸ್ಥೆ ಮಾಡಿದರು ಎನ್ನುವುದು ಸರಿ . 1 ನೇ ಆರೋಪಿ ಧರಿಸಿದ್ದ ಪ್ಯಾಂಟ್ ನ ಬಲ ಭಾಗದ ಜೇಬಿನ ಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಎನ್ನುವುದು ಸರಿ . ಈಗ ತೋರಿಸುತ್ತಿರುವ ಗುಲಾಬಿ ಬಣ್ಣದ ದ್ರಾವಣವಿರುವ ಬಾಟಲಿನ (ಎಂ.ಒ.6) ಮೇಲೆ ನನ್ನ ಸಹಿ ಇರುತ್ತದೆ.

16. ನಂತರ ದೂರುದಾರರು ತಮ್ಮ ಬಳಿ ಇದ್ದ ವಾಯ್ಸ್ ರೆಕಾರ್ಡರ್ ನ್ನು ತನಿಖಾಧಿಕಾರಿಗೆ ನೀಡಿದರು ಎನ್ನುವುದು ಸರಿ . ತನಿಖಾಧಿಕಾರಿಯವರು ಅದರಲ್ಲಿದ್ದ ಸಂಭಾಷಣೆಯನ್ನು ಲ್ಯಾಪ್ ಟಾಪ್ ಮೂಲಕ

ಎರಡು ಸಿಡಿ ಗಳಿಗೆ ವರ್ಗಾಯಿಸಿ , ಸೀಲು ಮಾಡಿ , ನಮ್ಮ ಸಹಿಯನ್ನು ಪಡೆದರು ಎನ್ನುವುದು ಸರಿ . ಈಗ ತೋರಿಸುತ್ತಿರುವ ಆರ್ಟಿಕಲ್ 15 ಮತ್ತು 15(ಎ) ರ ಮೇಲೆ ಇರುವ ಚೀಟಿಗಳಲ್ಲಿ ನನ್ನ ಸಹಿ ಇವೆ.

17. ನಂತರ ದೂರುದಾರರು ಮತ್ತು 1 ನೇ ಆರೋಪಿಯ ಮಾದರಿ ಧ್ವನಿಯನ್ನು ತನಿಖಾಧಿಕಾರಿ ಪಡೆದುಕೊಂಡರು ಎಂದು ಮಾಡಿದ ಸಲಹೆಗೆ ಸಾಕ್ಷಿ , "ನೆನಪಿಲ್ಲ " ಎನ್ನುತ್ತಾರೆ.

18. ನಂತರ ಸಂಜೆ 06.00 ಗಂಟೆಗೆ ಎಸಿಬಿ ಸಿಬ್ಬಂದಿ 2 ನೇ ಆರೋಪಿಯನ್ನು ದೂರುದಾರರ ಮನೆಗೆ ಕರೆದುಕೊಂಡು ಬಂದರು ಎನ್ನುವುದು ಸರಿ. ಅಲ್ಲಿ ತನಿಖಾಧಿಕಾರಿ, ದೂರುದಾರರು ಮತ್ತು 2 ನೇ ಆರೋಪಿಯ ಮಾದರಿ ಧ್ವನಿಯನ್ನು ದಾಖಲಿಸಿಕೊಂಡರು ಎಂದು ಮಾಡಿದ ಸಲಹೆಗೆ ಸಾಕ್ಷಿ , "ನೆನಪಿಲ್ಲ" ಎನ್ನುತ್ತಾರೆ.

19. ನಂತರ ತನಿಖಾಧಿಕಾರಿಯವರು 1 ನೇ ಆರೋಪಿಗೆ ದೂರುದಾರರಿಗೆ ಸಂಬಂಧಪಟ್ಟ ದಾಖಲಾತಿಗಳ ಬಗ್ಗೆ ಕೇಳಿದಾಗ, ಆತ ತನ್ನ ಬಳಿಯಲ್ಲಿ ಇದ್ದ ಬ್ಯಾಗ್ ಒಳಗೆ ಇದ್ದಂತಹ ದಾಖಲಾತಿಗಳನ್ನು ಹೊರ ತೆಗೆದು ತನಿಖಾಧಿಕಾರಿಗೆ ಕೊಟ್ಟರು ಎನ್ನುವುದು ಸರಿ . ತನಿಖಾಧಿಕಾರಿಯವರು ಅಲ್ಲಿಗೆ ಉಪ ತಹಸೀಲ್ದಾರರಾದ ಪರಿಶಿವಮೂರ್ತಿ ರವರನ್ನು ಕರೆಸಿದರು ಎನ್ನುವುದು ಸರಿ . ಅವರು ಆ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ದೃಡೀಕರಿಸಿ , ತನಿಖಾಧಿಕಾರಿಗೆ ನೀಡಿದರು ಎನ್ನುವುದು ಸರಿ .

20. ದೂರುದಾರರು ಮತ್ತು ಆಕೆಯ ಮಗ ಆ ಮನೆಯಲ್ಲಿ ಭೋಗ್ಯಕ್ಕಾಗಿ ಇದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

21. ಈ ಮೇಲ್ಕಂಡ ಎಲ್ಲಾ ನಡವಳಿಕೆಗಳ ಬಾಬ್ತು ಸಂಜೆ 04.00 ಗಂಟೆಯಿಂದ ರಾತ್ರಿ 08.00 ಗಂಟೆಯವರೆಗೆ ದೂರುದಾರರ ಮನೆಯಲ್ಲಿ ಮಹಜರ್ ಮಾಡಿ ನನ್ನ ಸಹಿಯನ್ನು ಪಡೆದರು ಎನ್ನುವುದು ಸರಿ . ಸಾಕ್ಷಿ ನಿಪಿ 22 ರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ

ತನ್ನ ಸಹಿಯನ್ನು ನಿಪಿ 22(ಸಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ಅಲ್ಲಿ ಪೋಟೋಗಳನ್ನು ತೆಗೆದರು ಎನ್ನುವುದು ಸರಿ . ನಿಪಿ 13 ರಿಂದ 20 ಪೋಟೋಗಳಲ್ಲಿ ನಾನು ಇದ್ದೇನೆ.

22. ದಿಃ 01.06.2019 ರಂದು ನೀವು, ತನಿಖಾಧಿಕಾರಿ , ರೇವಣ್ಣ , ಸಹಾಯಕ ಇಂಜಿನಿಯರ್ ರವರುಗಳು ದೂರುದಾರರ ಮನೆಗೆ ಹೋಗಿ ಸ್ಥಳವನ್ನು ನಕಾಶೆಯನ್ನು ತಯಾರಿಸುವ ಸಲುವಾಗಿ ತೋರಿಸಿರುತ್ತೀರಿ ಎಂದು ಮಾಡಿದ ಸಲಹೆಗೆ ಸಾಕ್ಷಿ , "ನೆನಪಿಲ್ಲ " ಎನ್ನುತ್ತಾರೆ.

23. ತನಿಖಾಧಿಕಾರಿಯವರ ಮುಂದೆ ಈಗ ಓದಿ ಹೇಳಿದಂತೆ , "ನಂತರ ತನಿಖಾಧಿಕಾರಿಗಳು ........ ಫಿನ್ತಾಪಲೀನ್ ಲೇಪಿತ ರೂ.8000/- ಹಣವನ್ನು ನೀಡಬೇಕೆಂದು " ಎಂದು ಹೇಳಿಕೆ ನೀಡಿರುತ್ತೇಪನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 23(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು.

24. ತನಿಖಾಧಿಕಾರಿಯವರ ಮುಂದೆ ಈಗ ಓದಿ ಹೇಳಿದಂತೆ , "ನಾನು ಮತ್ತು ಫಿರ್ಯಾದಿಯವರು ............ಅವರು ರಿಸೀವ್ ಮಾಡಲಿಲ್ಲ " ಎಂದು ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 23(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

25. ತನಿಖಾಧಿಕಾರಿಯವರ ಮುಂದೆ ಈಗ ಓದಿ ಹೇಳಿದಂತೆ, "ಅದೇ ಆರ್ . ಐ . ಕೇಳಿದ್ದು, ಎಷ್ಟೋ ಕೊಡಿ' ............ನಂತರ ಅವರು 'ನಾಳೇ ಅಥವಾ ನಾಳಿದ್ದು, ಆಗುತ್ತೇ " ಎಂದು ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 23(ಸಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

26. ತನಿಖಾಧಿಕಾರಿಯವರ ಮುಂದೆ ಈಗ ಓದಿ ಹೇಳಿದಂತೆ, "ನನಗೆ ಕೇಳಿದಾಗ ............ಒಂದು ಬೈಕ್ ನಲ್ಲಿ ಮಣಿಕಾಂತ ರವರನ್ನು ಕರೆದುಕೊಂಡು ನಮ್ಮ ಮನೆಗೆ ಬಂದನು" ಎಂದು ಹೇಳಿಕೆ

ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 23(ಡಿ) ಎಂದು ಗುರುತುಪಡಿಸಿಕೊಳ್ಳಲಾಯಿತು.

27. ತನಿಖಾಧಿಕಾರಿಯವರ ಮುಂದೆ ಈಗ ಓದಿ ಹೇಳಿದಂತೆ, "ಎಷ್ಟು ಹೇಳಿದ್ರಿ ಆವತ್ತು …………ನಿಮಗೆ ಸಿಗ್ನಲ್ ನೀಡಿದೆ" ಎಂದು ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 23(ಇ) ಎಂದು ಗುರುತುಪಡಿಸಿಕೊಳ್ಳಲಾಯಿತು.

28. ತನಿಖಾಧಿಕಾರಿಯವರ ಮುಂದೆ ಈಗ ಓದಿ ಹೇಳಿದಂತೆ, "ನಂತರ ತನಿಖಾಧಿಕಾರಿಗಳು …………ಜೇಬಿನಿಂದ ಹೊರ ತೆಗೆದು ಹಾಜರುಪಡಿಸಿದ್ದು, " ಎಂದು ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 23(ಎಫ್ ) ಎಂದು ಗುರುತುಪಡಿಸಿಕೊಳ್ಳಲಾಯಿತು.

29. ತನಿಖಾಧಿಕಾರಿಯವರ ಮುಂದೆ ಈಗ ಓದಿ ಹೇಳಿದಂತೆ, "2 ನೇ ಆರೋಪಿತರಾದ …………ಒಂದು ಸಿಡಿಗೆ ಕಾಪಿ ಮಾಡಿ " ಎಂದು ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 23(ಜಿ ) ಎಂದು ಗುರುತುಪಡಿಸಿಕೊಳ್ಳಲಾಯಿತು.

30. ತನಿಖಾಧಿಕಾರಿಯವರ ಮುಂದೆ ಈಗ ಓದಿ ಹೇಳಿದಂತೆ, "ಫಿರ್ಯಾದಿಯವರಿಗೆ ಸೇರಿದ ವಾಸದ ಮನೆಗಯ ಬಗ್ಗೆ ………… ಭೋಗ್ಯಕ್ಕೆ ದಿಃ 14.01.2017 ರಿಂದ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ. " ಎಂದು ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 23(ಹೆಚ್ ) ಎಂದು ಗುರುತುಪಡಿಸಿಕೊಳ್ಳಲಾಯಿತು.

31. ದಿಃ 01.06.2019 ರಂದು ನೀಡಿದ ಮರು ಹೇಳಿಕೆಯಲ್ಲಿ ನಾನು , “ಪೋಲೀಸ್ ಇನ್ಸ್‌ಪೆಕ್ಟರ್ ರವರ ಮುಂದೆ ………… ನಕಾಶೆಯನ್ನು ತಯಾರಿಸಲು ಸಹಕರಿಸಿರುತ್ತೇನೆ " ಎಂದು ಹೇಳಿಕೆ

ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 24 ಎಂದು ಗುರುತುಪಡಿಸಿಕೊಳ್ಳಲಾಯಿತು.

32. ತನಿಖಾಧಿಕಾರಿಯವರು ಆ ನೋಟುಗಳನ್ನು ಪುನಃ ಪ್ಯಾಕ್ ಮಾಡಿ ಸೀಲು ಮಾಡಿರುತ್ತಾರೆ. ಆ ಪ್ಯಾಕ್ ನ ಮೇಲೆ ಇರುವ ನನ್ನ ಸಹಿಯನ್ನು ನಾನು ಗುರುತಿಸಬಲ್ಲೆ.

33. ನಾನು ಎಲ್ಲವನ್ನು ಹೇಳಿದ್ದರೂ ಸಹ , ಫಿರ್ಯಾದುದಾರರು ಲಂಚದ ಹಣವನ್ನು 1 ನೇ ಆರೋಪಿಗೆ ಕೊಟ್ಟಿರುವುದಿಲ್ಲ , 1 ನೇ ಆರೋಪಿ ಕೇಳಿರುವುದಿಲ್ಲ ಎಂದು 1 ನೇ ಆರೋಪಿಯೊಂದಿಗೆ ಶಾಮೀಲಾಗಿ ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದು , ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.